




# ಶ್ರೀರಾಮಕೃಷ್ಣರ ಕಾಶೀಯಾತ್ರೆ


ಕಥೆ : **ಸ್ವಾಮಿ ವಿಮೂರ್ತಾನಂದ** ಚಿತ್ರ : **ಕೋವಿ**






5
ಗುರುದೇವ, ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನಾವು ಇನ್ನೂ ತುಂಬಾ ಸ್ಥಳಗಳಿಗೆ ಯಾತ್ರೆ ಮಾಡಬೇಕಾಗಿದೆ. ಅದಕ್ಕಾಗಿ ನಮಗೆ ಸಾಕಷ್ಟು ಹಣ ಬೇಕಾಗುವುದು. ಅಲ್ಲದೆ ಈ ಜನರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅವರಿಗೆಲ್ಲಾ ಆಹಾರ ನೀಡುತ್ತ ಹೋದರೆ ನಮ್ಮ ಯಾತ್ರೆಗೆ ಹಣ ಉಳಿಯಲಾರದು ಅನ್ನಿಸುತ್ತದೆ.



6
ಏನು? ಈ ಜೀವಂತ ದೇವರುಗಳನ್ನು ನಿರ್ಲಕ್ಷ್ಯ ಮಾಡಿ ಅನೇಕ ಪುಣ್ಯಕ್ಷೇತ್ರಗಳಿಗೆ ಯಾತ್ರೆ ಮಾಡಿದರೆ, ಅದರಿಂದ ಏನೂ ಪ್ರಯೋಜನವಿಲ್ಲ.
ಜನರ ದಾರುಣ ಸ್ಥಿತಿಯನ್ನು ಕಂಡು ಶ್ರೀರಾಮಕೃಷ್ಣರಿಗೆ ದುಃಖ ಉಮ್ಮಳಿಸಿ ಬಂತು. ಅವರು ಕಣ್ಣೀರು ಸುರಿಸತೊಡಗಿದರು. ಆದರೆ ಮಥುರನಾಥ ಇನ್ನೂ ಹಿಂದೆಮುಂದೆ ನೋಡುತ್ತಿದ್ದ......



7
ಸರಿ, ನಿನ್ನಿಷ್ಟ ಹೇಗೋ ಅಂತೆಯೇ ಮಾಡು. ನಾನು ಕಾಶಿಗೆ ಹೋಗಲಾರೆ. ನಾನು ಈ ಜನರ ಜೊತೆಗೇ ಇದ್ದುಬಿಡುತ್ತೇನೆ. ಅವರಿಗೆ ಬೇರೆ ಯಾರೂ ಇಲ್ಲ. ಈ ಜನರನ್ನು ಇಂಥಾ ಪರಿಸ್ಥಿತಿಯಲ್ಲಿ ಬಿಟ್ಟು ನಾನು ನಿನ್ನೊಂದಿಗೆ ಬರಲಾಗದು.
ಹೀಗೆ ಹೇಳುತ್ತ ಶ್ರೀರಾಮಕೃಷ್ಣರು ಆ ಜನರೊಂದಿಗೆ ಅಲ್ಲೇ ಕುಳಿತುಬಿಟ್ಟರು.


8
ಮಥುರನ ಪತ್ನಿ ಜಗದಾಂಬಾ ತುಂಬ ಭಕ್ತಿಪರಾಯಣೆ. ಮಥುರನು ಅವಳೊಂದಿಗೆ ಸಮಾಲೋಚನೆ ನಡೆಸಿದ.
ಜಗದಾಂಬಾ, ಈ ಜನರಿಗೆ ಆಹಾರ ನೀಡುವುದಕ್ಕೆ ಸಾಕಷ್ಟು ಹಣ ಬೇಕಾಗುವುದು. ಈಗ ನಾವೇನು ಮಾಡೋಣ?
ಬಡ ಜನರ ಸೇವೆ ಮಾಡುವುದೆಂದರೆ ದೇವರ ಸೇವೆ ಮಾಡಿದಂತೆ. ಶ್ರೀರಾಮಕೃಷ್ಣರೇ ಹಾಗೆ ಮಾಡಲು ಹೇಳುತ್ತಿರುವುದರಿಂದ ನಮಗೆ ಇನ್ನೇನು ಭಯ? ಅವರ ಕೃಪೆಯಿಂದ ಎಲ್ಲವೂ ಸುಗಮವಾಗಿ ನಡೆಯುವುದು. ಖಂಡಿತ ನಾವು ಇದನ್ನು ಮಾಡಬಲ್ಲೆವು.....


9
ಸರಿ, ನಿನ್ನ ಮಾತನ್ನು ನಾನು ಒಪ್ಪುತ್ತೇನೆ. ಈ ಜನರಿಗೆ ಆಹಾರ, ಬಟ್ಟೆಬರೆ ನೀಡಲು ನಾನು ಕಲ್ಕತ್ತೆಯಿಂದ ಹಣ ತರಿಸಿಕೊಳ್ಳುತ್ತೇನೆ.
....ಸರಿ, ಶ್ರೀರಾಮಕೃಷ್ಣರ ಇಚ್ಛೆಯಂತೆ ನಾವು ಈ ಬಡಜನರಿಗೆ ಆಹಾರವನ್ನು ಒದಗಿಸಬೇಕು.
10
ಎಲ್ಲವನ್ನೂ ಬಹಳ ಬೇಗನೆ ನೆರವೇರಿಸಿದರು. ಹಳ್ಳಿಯ ಜನರಿಗೆಲ್ಲ ಆಹಾರದ ವ್ಯವಸ್ಥೆಯಾಯಿತು. ಅವರೆಲ್ಲ ಆಹಾರವನ್ನು ಸ್ವೀಕರಿಸುತ್ತಿರುವುದನ್ನು ಕಂಡು ಶ್ರೀರಾಮಕೃಷ್ಣರಿಗೆ ಆನಂದವಾಯಿತು.
ಜೀವ ಸೇವೆಯೇ ಶಿವನ ಸೇವೆ. ಮಥುರ, ಭಗವಾನ್ ವೈದ್ಯನಾಥನು ಇವರ ಮೂಲಕ ನನಗೆ ಕಾಣಿಸಿಕೊಳ್ಳುತ್ತಿದ್ದಾನೆ.
ಗುರುದೇವ, ನೀವು ಸಂತೃಪ್ತರಾದರೆ ಈ ಜನರ ದುಃಖ ವೆಲ್ಲವೂ ಮಾಯವಾಗುವುದು.
11
ಇದಾದ ಮೇಲಷ್ಟೇ ಶ್ರೀರಾಮಕೃಷ್ಣರು ತಮ್ಮ ತೀರ್ಥಯಾತ್ರೆಯನ್ನು ಮುಂದುವರಿಸಿದರು. ಕಾಶಿಯಲ್ಲಿ ಅವರು ಭಾವಸಮಾಧಿಯನ್ನು ಹೊಂದಿದರು. ಒಮ್ಮೆ ದೋಣಿಯಲ್ಲಿ ಅವರು ಸಂಚರಿಸುತ್ತಿದ್ದಾಗ ಶಿವನ ದರ್ಶನವನ್ನು ಪಡೆದರು.
ಹರ ಹರ ಮಹಾದೇವ! ಜೈ ವಿಶಾಲಾಕ್ಷಿ!
12
ಶ್ರೀರಾಮಕೃಷ್ಣರ ರೂಪದಲ್ಲಿ ಸಾಕ್ಷಾತ್ ಶಿವನೇ ತನ್ನ ಬಳಿ ಇದ್ದಂತೆ ಮಥುರನಿಗೆ ಭಾಸವಾಯಿತು. ಆದ್ದರಿಂದ ಅವರ ಮಾತಿನ ಪ್ರಕಾರ ಅವನು ಈ ಯಾತ್ರೆಯ ಸಮಯದಲ್ಲಿ ಸೇವಾಕಾರ್ಯಕ್ಕೆ ತುಂಬಾ ಹಣವನ್ನು ನೀಡಿದ.
ಶ್ರೀರಾಮಕೃಷ್ಣರಿಗೂ ಅವನು ಏನಾದರೂ ನೀಡಬೇಕೆಂದಿದ್ದ. ತಮ್ಮ ಸೊತ್ತಿನ ಒಂದು ಭಾಗವನ್ನು ಅವರಿಗೆ ಕೊಡಬೇಕೆಂದು ಅವನು ತಯಾರಿ ನಡೆಸಿದ್ದ.






''ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು. ಒಬ್ಬನು ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡಿದರೆ ಅವನ ಪೂಜೆ ಬರಿಯ ಗೌಣ. ಜಾತಿ-ಕುಲ-ಗೋತ್ರಗಳನ್ನು ಲೆಕ್ಕಿಸದೆ ಯಾರು ಒಬ್ಬ ಬಡವನಲ್ಲಿ ಶಿವನನ್ನು ನೋಡಿ ಅವನಿಗೆ ಸೇವೆ ಸಲ್ಲಿಸುವರೋ, ಅವನಿಗೆ ಸಹಾಯ ಮಾಡುವರೋ, ಅವರ ಮೇಲೆ ಶಿವನಿಗೆ ಕೇವಲ ತನ್ನನ್ನು ವಿಗ್ರಹದಲ್ಲಿ ನೋಡುವವರಿಗಿಂತ ಹೆಚ್ಚು ಪ್ರೀತಿ.''

— ಸ್ವಾಮಿ ವಿವೇಕಾನಂದ